**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,**
**ಕುಣಿಗಲ್.**

**ಸಿ.ಸಿ.ನಂ. 3869/2022**

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-03

ಸಾಕ್ಷಿದಾರನ ಹೆಸರು :- ತನುಜಾ
ಗಂಡನ ಹೆಸರು :- ಆತ್ಮಾನಂದ
ವಯಸ್ಸು :- 40 ವರ್ಷ
ಉದ್ಯೋಗ :- ಮನೆಗೆಲಸ
ವಾಸ :- ನಿಡಸಾಲೆ

**ಸಾಕ್ಷಿಗೆ ದಿಃ 30.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾಸಾ 2 ಮತ್ತು 3 ನನ್ನ ಅತ್ತೆ ಮಾವ ಆಗಬೇಕು. ಚಾಸಾ 4 ನನ್ನ ಗಂಡ ಆಗಬೇಕು.ಆರೋಪಿತರು ನನಗೆ ಗೊತ್ತು. ದಿಃ 09.04.2020 ರಂದು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ನಮ್ಮ ಮನೆಯ ಪಕ್ಕದ ಗಲ್ಲಿಯ ವಿಚಾರವಾಗಿ ಆರೋಪಿತರಿಗೆ ಮತ್ತು ಚಾಸಾ 2 ರಿಂದ 4 ಅವರಿಗೆ ಜಗಳ ವಾಗಿದ್ದು ನಮ್ಮ ಜಾಗದಲ್ಲಿ ಆರೋಪಿತ ಮನೆಯನ್ನು ಕಟ್ಟಿದ್ದು ಅದನ್ನು ಕೇಳಿದ್ದಕ್ಕೆ ಆರೋಪಿ 1 ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ. ಚಾಸಾ 3 ಮತ್ತು 4 ಕೇಳಲು ಬಂದಾಗ ಅವರಿಗೂ ಸಹ ಆರೋಪಿ 1 ಮತ್ತು 2 ದೊಣ್ಣೆ ಮತ್ತು ಕಲ್ಲಿನಿಂದ ಬುಜಗಳಿಗೆ ಕೈಗಳಿಗೆ ಹೊಡೆದಿರುತ್ತಾರೆ. ಪಂಚಾಯಿತಿಯವರಿಂದ ರಾಜಿ ಮಾಡಿಸುವ ಕುರಿತು ಪಂಚಾಯಿತಿದಾರರು ಹೇಳಿದ್ದು ನಂತರ 16.04.2020 ರಂದು ನಾನು ದೂರನ್ನು ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರು ಸಂಜೆ 4.30 ರಿಂದ 5.30 ರವೆಗೆ ಸ್ಥಳದಲ್ಲಿ ಚಾಸಾ 7 ಮತ್ತು 8 ಅವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಸಮಯದಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ಜಪ್ತು ಮಾಡಿಕೊಂಡಿರುತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಮು. ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ಕೃಷ್ಣಪ್ಪ ಅವರ ಮನೆಯವರು ನಮ್ಮ ಮನೆಯ ಪಕ್ಕದ ಗಲ್ಲಿಯ ಜಾಗದ ವಿಚಾರವಾಗಿ ಆಗಾಗ ಜಗಳ ಮಾಡುತ್ತಿದ್ದರು ಎಂದರೆ ಸರಿ. ದಿಃ 09.04.2020 ರಂದು ನಾನು ಚಾಸಾ 2 ರಿಂದ 4 ಮನೆಯ ಮುಂದೆ ಮಾತನಾಡುತ್ತಾ ಕುತಿಳಿಕೊಂಡಿದ್ದು ಆಗ ಆರೋಪಿತರು ಅವರ ಮನೆಯ ಮುಂದೆ ನಿಂತು ಕೊಂಡು ಗಲ್ಲಿಯ ವಿಚಾರವಾಗಿ ಬೈಯುತ್ತಿದ್ದರು ಎಂದರೆ ಸರಿ. ಆಗ ಚಾಸಾ 2 ಅವರು ಏಕೆ ಸುಮ್ಮನೆ ಬೈಯುತ್ತಿದ್ದೀರಾ ಎಂದು ಕೇಳಿರುತ್ತಾರೆ ಎಂದರೆ ಸರಿ. ಆಗ ಆರೋಪಿತರೆಲ್ಲರೂ ಚಾಸಾ 2 ನಿಂತಿದ್ದ ಸ್ಥಳಕ್ಕೆ ಬಂದು ಏನೇ ಬೇವಸ್ಸಿ ಮುಂಡೆ ಸೊಳೆ ಮುಂಡೆ ಎಂದು ಬೈದಿರುತ್ತಾರೆ ಎಂದರೆ ಸರಿ. ಆರೋಪಿ 1 ಮತ್ತು 2 ಚಾಸಾ 2 ಅವರನ್ನು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಹೊಡೆದು ಕಾಲುಗಳಿಂದ ಒದೆಯುತ್ತಿದ್ದರು ಎಂದರೆ ಸರಿ. ಆಗ ಚಾಸಾ 3 ಮತ್ತು 4 ಜಗಳ ಬಿಡಿಸಲು ಹೋದಾಗ 3 ಜನರು ಬೋಳಿ ಮಕ್ಕಳಾ ಸೊಳೆ ಮಕ್ಕಳಾ ಎಂದು ಬೈದಿರುತ್ತಾರೆ ಎಂದರೆ ಸರಿ. ಆರೋಪಿ 1 ದೊಣ್ಣೆಯಿಂದ ಚಾಸಾ 4 ಅವರ ಮೈ ಕೈಗೆ ಹೊಡೆದಿದ್ದು ಆರೋಪಿ 3 ಅಲ್ಲೆ ಬಿದಿದ್ದ ಕಲ್ಲಿನಿಂದ ಚಾಸಾ 3 ಅವರ ಮೈಕೈಗೆ ಗುದ್ದಿರುತ್ತಾರೆ ಎಂದರೆ ಸರಿ. ಚಾಸಾ 5 ಮತ್ತು 6 ಅವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಜೀವ ಬೆದರಿಕೆ ಹಾಕಿ ಕಲ್ಲು ಮತ್ತು ದೊಣ್ಣೆಯನ್ನು ಅಲ್ಲಿಯೇ ಬಿಡಾಡಿ ಹೊರಟು ಹೋಗಿರುತ್ತಾರೆ ಎಂದರೆ ಸರಿ. ದಿಃ 16.04.2020 ರಂದು ಸಂಜೆ 4.45 ರಿಂದ 5.45 ರವರೆಗೆ ಪೋಲಿಸರು ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಆರೋಪಿತರ ಪರ ಪಾಟೀ ಸವಾಲುಃ ಸಿ.ಜಿ.ಸಿ ವಕೀಲರಿಂದಃ**

ನಾನು 10ನೇ ತರಗತಿಯವರೆಗೆವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರರಣದ ವಿಚಾರವಾಗಿ ನಾನು ದೂರನ್ನು ನೀಡಿರುತ್ತೇನೆ. ದೂರನ್ನು ನಾನೇ ನನ್ನ ಗಂಡನ ಹೇಳಿಕೆಯ ಮೇರೆಗೆ ಬರೆದಿರುತ್ತೇನೆ. ಯಾವುದಾದರೂ ಗಲಾಟೆ ಆದರೆ ನನಗೆ ತಕ್ಷಣವೇ ದೂರನ್ನು ನೀಡಬೇಕೆಂದು ಗೊತ್ತಿದೆ. ನಮ್ಮ ಮನೆಯ ಪಕ್ಕದಲ್ಲಿ ಆರೋಪಿತರ ಮನೆ ಇದ್ದು ಯಾವ ದಿಕ್ಕು ಎಂದು ನನಗೆ ಗೊತ್ತಿಲ್ಲ. ಆರೋಪಿತರ ಮನೆ ನಮ್ಮ ಮನೆಯ ಪಶ್ಚಿಮಕ್ಕೆ ಇರುತ್ತದೆ ಎಂದರೆ ಸರಿ. ಆರೋಪಿತರು ಮನೆ ಕಟ್ಟುವಾಗ ಪರವಾನಿಗೆ ಪಡೆದು ಪೂರ್ವ ದಿಕ್ಕಿಗೆ ಗಲ್ಲಿ ಬಿಟ್ಟು ಕಟ್ಟಿರುತ್ತಾರೆ ಎಂದರೆ ಸರಿ.

ಚಾಸಾ 3 ಮತ್ತು ಆರೋಪಿತರ ನಡುವೆ ಸಿವಿಲ್ ನ್ಯಾಯಾಲಯದಲ್ಲಿಯೂ ಸಹ ದಾವೆ ಇದೆ ಎಂದರೆ ಸರಿ. ಸದರಿ ದಾವೆಯ ದ್ವೇಷದಿಂದ ಈ ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ಚಾಸಾ 4 ಅವರ ಸ್ನೇಹಿತರು ಎಂದರೆ ಸಾಕ್ಷಿ ಊರಿನವರು ಆಗಿದ್ದು ರಸ್ತೆಯಲ್ಲಿ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಗಲಾಟೆ ದಿ. 09.04.2020 ರಂದು ಆಗಿರುತ್ತದೆ. ಆ ದಿನ ನಾನು ಮತ್ತು ಚಾಸಾ 2 ರಿಂದ 4 ಆರೋಪಿ 1 ಮತ್ತು ಅವರ ಅತ್ತೆಯ ಮೇಲೆ ಹಲ್ಲೆ ಮಾಡಿದ ಕಾರಣ ದೂರನ್ನು ನೀಡಿದ್ದು ನಾವು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇವೆ ಎಂದರೆ ಸರಿ.

ಆರೋಪಿ 1 ಅವರ ಅತ್ತೆಗೆ ವಯಸ್ಸಾಗಿದೆ ಎಂದರೆ ಸರಿ. ಚಾಸಾ 3 ಅವರು ರಾಜಕೀಯ ಚನ್ನಾಗಿದೆ ಎಂದರೆ ಸರಿಯಲ್ಲ. ದಿಃ 09.04.2020 ರಂದು ಗಲಾಟೆ ಸಮಯದಲ್ಲಿ ನಾನು ಚಾಸಾ 2 ಮತ್ತು 3 ಇದ್ದರು. ಗಲಾಟೆ ಸಮಯದಲ್ಲಿ ನನ್ನ ಗಂಡ ಗದ್ದೆಯಲ್ಲಿದ್ದರು. ಗಲಾಟೆ ವಿಚಾರವನ್ನು ಚಾಸಾ 4 ಅವರಿಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ 9.45 ರ ಸಮಯದಲ್ಲಿ ಅವರು ಜಮೀನಿನಿಂದ ತಿಂಡಿ ತಿನ್ನಲು ಬರುತ್ತಿದ್ದರು ಎಂದು ಹೇಳುತ್ತಾರೆ. ಈ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ. ನಾನು ನನ್ನ ಅತ್ತೆ ಮಾವ ಗಂಡ ಮಾತನಾಡುತ್ತಾ ಕುಳಿತಿರುವುದಾಗಿ ಬರೆಸಿರುತ್ತೇನೆ.

ಯಾವ ವಿಚಾರ ಸರಿಯಿರುತ್ತದೆ ಎಂದರೆ ಸಾಕ್ಷಿ ಗಲಾಟೆ ಸಮಯಕ್ಕೆ ನನ್ನ ಗಂಡ ಬಂದಿರ ಬಹುದು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ನಾನು ಹೇಳಿದ ಸಮಯದಲ್ಲಿ ಆರೋಪಿತರು ಅವರ ಮನೆಯ ಹತ್ತಿರ ಇದ್ದರು. ಆಗ ಸಮಯ 9 ಗಂಟೆ ಆಗಿತ್ತು. ಆರೋಪಿ 1 ದೊಣ್ಣೆ ಮತ್ತು ಆರೋಪಿ 3 ಅವರ ಕೈಯಲ್ಲಿ ಕಲ್ಲು ಇತ್ತು ಎಂದು ಹೇಳುತ್ತಾರೆ. ದೊಣ್ಣೆ ಆರೋಪಿ 1 ಅವರ ಮನೆಯ ಹತ್ತಿರ ಸ್ಥಳದಲ್ಲಿಯೇ ಬಿದ್ದಿತ್ತು. ದೊಣ್ಣೆ ಯಾವ ಜಾತಿಯದ್ದು ಎಂದರೆ ಸಾಕ್ಷಿ ನೀಲಗಿರಿಯ ಜಾತಿಯದ್ದು ಇರಬಹುದೆಂದು ಹೇಳುತ್ತಾರೆ. ಸದರಿ ದೊಣ್ಣೆ 1 ಮಾರು ಉದ್ದ ಹಿಡಿಯಷ್ಟು ದಪ್ಪ ಇತ್ತು ಎಂದು ಹೇಳುತ್ತಾರೆ. ಕಲ್ಲು ಯಾವ ಜಾತಿಯದೆಂದು ನನಗೆ ಗೊತ್ತಿಲ್ಲ ಒಂದು ಮುಷ್ಟಿಯಷ್ಟು ಇತ್ತು ಎಂದು ಹೇಳುತ್ತಾರೆ.

ನನ್ನ ಗಂಡ ಜಮೀನಿನಿಂದ ಬಂದಾಗ ಆರೋಪಿತರು ಚಾಸಾ 2 ಅವರಿಗೆ ಬೈಯುತ್ತಿದ್ದರು. ನನ್ನ ಗಂಡ ಬಂದಾಗ ಆರೋಪಿತರ ರಸ್ತೆಯಲ್ಲಿದ್ದರು. ಜಾಗದ ಚಕ್ಕುಬಂದಿ ಗೊತ್ತಿಲ್ಲ ಅವರ ಮನೆಯ ಹತ್ತಿರ ನಿಂತು ಬೈಯುತ್ತಿದ್ದರು. ನಮ್ಮ ಮನೆಯ ಅಕ್ಕಪಕ್ಕ ಸುಮಾರು ಬೇರೆ ಮನೆಗಳು ಇವೆ ಎಂದರೆ ಸರಿ. ಗಲಾಟೆ ಸಮಯದಲ್ಲಿ ರಕ್ತ ಬರುವ ಗಾಯಗಳು ಚಾಸಾ 2 ರಿಂದ 4 ಅವರಿಗೆ ಆಗಿತ್ತು ಎಂದು ಹೇಳುತ್ತಾರೆ. ಬಟ್ಟೆ ರಕ್ತ ಕಲೆ ಆಗಿರಲಿಲ್ಲ.

ಚಾಸಾ 3 ಅವರಿಗೆ ಎಷ್ಟು ರಕ್ತ ಗಾಯಗಳು ಆಗಿದ್ದವು ಎಂದು ನನಗೆ ಗೊತ್ತಿಲ್ಲ. ಚಾಸಾ 5 ಮತ್ತು 6 ಅವರ ಮನೆಗಳು ನಮ್ಮ ಮನೆಯಿಂದ 2 -3 ಬೀದಿಗಳನ್ನು ಬಿಟ್ಟು ಬರುತ್ತೇವೆ. ಪಂಚಾಯಿತಿ ಯಜಮಾನರು ರಾಜಿ ಮಾಡಿಸುತ್ತೆವೆಂದು ಹೇಳಿದ್ದಕ್ಕೆ ದೂರನ್ನು ತಡವಾಗಿ ನೀಡಿರುತ್ತೇವೆ ಅವರ ಹೆಸರು ನನಗೆ ಗೊತ್ತಿಲ್ಲ. ದೊಣ್ಣ ಮತ್ತು ಕಲ್ಲನ್ನು ಪೋಲಿಸರು ಸ್ಥಳಕ್ಕೆ ಬಂದು ಜಪ್ತು ಮಾಡಿಕೊಂಡು ಹೋಗಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಯಾರಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಚಕ್ಕುಬಂದಿಯೇ ಸಹ ಗೊತ್ತಿಲ್ಲವೆಂದರೆ ಸಾಕ್ಷಿ ದಿಕ್ಕುಗಳು ಗೊತ್ತಾಗುವುದಿಲ್ಲವೆಂದು ಹೇಳುತ್ತಾರೆ. ಪೋಲಿಸರು ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡಿರುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ.

ಆರೋಪಿತರು ಚಾಸಾ 2 ರಿಂದ 4 ಅವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಯಾವುದೇ ಅವ್ಯಾಚ್ಚ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಿಲ್ಲ ದೊಣ್ಣೆ ಮತ್ತು ಕಲ್ಲನ್ನು ವಶಪಡಿಸಿಕೊಂಡಿಲ್ಲವೆಂದರೆ ಸರಿಯಲ್ಲ. ಆರೋಪಿತರ ಮೇಲೆ ಚಾಸಾ 3 ಮತ್ತು 4 ಅವರಿಗೆ ದ್ವೇಷ ಇರುವ ಕಾರಣ ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊ. ಠಾಣೆಗೆ ಹೋದಾಗ 2-3 ಕಡೆ ಸಹಿ ಮಾಡಿರುತ್ತೇನೆ. ಪಂಚನಾಮೆಗೆ ಪೊ. ಠಾಣೆಯಲ್ಲಿ ಸಹಿ ಮಾಡಿರುತ್ತೀರಿಎಂದರೆ ಸಾಕ್ಷಿ ಮಾಡಿದಬಹುದು ಮರೆತು ಹೋಗಿರುತ್ತದೆಂದು ಹೇಳುತ್ತಾರೆ. ಪ್ರಕರಣಕ್ಕೂ ಆರೋಪಿತರಿಗೂ ಮತ್ತು ಮು. ಮಾ. ಗೂ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**